# ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

ಕರ್ಮಣಿ
KARMANI

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

6ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 4ನೇ ಬ್ಲಾಕ್, ಜಯನಗರ, ಬೆಂಗಳೂರು – 560 011.


ಸಂಖ್ಯೆ: ಮಅನಿ:ದೇಪುಯೋ:ಮೌವ:ಶಿಫಾರಸ್ಸು:06:2019–20 83 B

ದಿನಾಂಕ:07.06.2019

SI NO. 86

ಗೆ,
ಸರ್ಕಾರದ ಕಾರ್ಯದರ್ಶಿಗಳು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು– 560 001

ಮಾನ್ಯರೇ,

ವಿಷಯ: ದಿ:22.2.2019ರಂದು ನಡೆದ ಕೆ.ಡಿ.ಪಿ.ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮಗಳ ಕುರಿತು.

ಉಲ್ಲೇಖ: (1)ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳು ಪ್ರಗತಿ ಪರಿಶೀಲನಾ ಸಭೆಯ ದಿ:22.02.2019ರ ನಡವಳಿ ಸಂಖ್ಯೆ:32

(2)ನಿರ್ದೇಶಕರು, ಪಿ.ಎಂ.ಐ.ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ರವರ ಅನಧಿಕೃತ ಟಿಪ್ಪಣಿ ಸಂಖ್ಯೆ:ಪಿ.ಡಿ:2: ಐಎಂ.ಎಂ.2019:ದಿ:01.03.2019.

(3)ಸರ್ಕಾರದ ಕಾರ್ಯದರ್ಶಿಗಳ ಪತ್ರ ಸಂಖ್ಯೆ:ಮಮ ಇ:32:ಸ್ವೀಮರ:2019: ದಿನಾಂಕ:15.03.2019.

2016-17?

***

ಮೇಲ್ಕಾಣಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1)ರ ನಡವಳಿ ಸಂಖ್ಯೆ: 32ರಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ವತಿಯಿಂದ ನಡೆಸಿದ ಮೌಲ್ಯಮಾಪನ ಅಧ್ಯಯನಗಳಿಗೆ ತುರ್ತಾಗಿ ಅನುಪಾಲನಾ ವರದಿಗಳನ್ನು ಕಳುಹಿಸಲು ತಿಳಿಸಿರುತ್ತಾರೆ. ಅದರಂತೆ ಉಲ್ಲೇಖ (2)ರ ಅನಧಿಕೃತ ಟಿಪ್ಪಣಿಯಲ್ಲಿ ಸದರಿ ನಡವಳಿ ಮೇಲೆ ಕೈಗೊಂಡ ಕ್ರಮದ ಕುರಿತು ವರದಿ ಸಲ್ಲಿಸುವಂತೆ ಮಾನ್ಯ ಮುಖ್ಯ ಕಾರ್ಯದರ್ಶಿಗಳು ತಿಳಿಸಿರುತ್ತಾರೆ. ಉಲ್ಲೇಖ (3)ರಲ್ಲಿ ತಾವು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಿಂದ ದೇವದಾಸಿ ಪುನರ್ವಸತಿ ಯೋಜನೆಯ ಮೌಲ್ಯಮಪನ ವರದಿಯ ಶಿಫಾರಸ್ಸುಗಳ ಕುರಿತು ಕೈಗೊಂಡ ಕ್ರಮದ ವರದಿ ಸಲ್ಲಿಸಲು ತಿಳಿಸಿರುತ್ತೀರಿ.

2018–19ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ದೇವದಾಸಿ ಪುನರ್ವಸತಿ ಯೋಜನೆಯು ಜಿಲ್ಲೆಗಳಲ್ಲಿ ಅನುಷ್ಠಾನಗೊಂಡ ಬಗ್ಗೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರ ಇವರು ಹೈದರಾಬಾದ್ ಕರ್ನಾಟಕ ಸೆಂಟರ್ ಫಾರ್ ಅಡ್ವಾನಸ್ಡ್ ಲರ್ನಿಂಗ್, ಕಲಬುರಗಿರವರ ಮುಖಾಂತರ ಮೌಲ್ಯಮಾಪನಗೊಳಿಸಿರುತ್ತಾರೆ.

ಸದರಿ ಮೌಲ್ಯಮಾಪನದ ಅವಧಿಯಲ್ಲಿ ಕಂಡುಬಂದ ಕೆಲವು ಅಂಶಗಳ ಬಗ್ಗೆ ಕ್ರಮವಹಿಸುವಂತೆ ಶಿಫಾರಸ್ಸು ಮಾಡಿರುತ್ತದೆ. ಸದರಿ ಶಿಫಾರಸ್ಸುಗಳ ಮೇಲೆ ನಿಗಮವು ಈಗಾಗಲೇ ಕೈಗೊಂಡಿರುವ ಹಾಗೂ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ವಿವರಿಸಿ ಈ ಪತ್ರದೊಂದಿಗೆ ಲಗತ್ತಿಸಿ ಗೌರವಪೂರಕವಾಗಿ ಸಲ್ಲಿಸಿದೆ.

"ಕರಡು ವ್ಯವಸ್ಥಾಪಕ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ."

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
ಸ್ವೀಕೃತಿ ಸಂಖ್ಯೆ ...... 1306
ದಿನಾಂಕ ......
ಗಣಕ ಸಂಖ್ಯೆ ......
ದಿನಾಂಕ ......

342/3
13/6/19

ತಮ್ಮ ವಿಶ್ವಾಸಿ,

ಪ್ರಧಾನ ವ್ಯವಸ್ಥಾಪಕರು–2
ಕ.ರಾ.ಮ.ಅ.ನಿಗಮ.

ಪ್ರತಿಯನ್ನು:
(1)ನಿರ್ದೇಶಕರು, ಪಿ.ಎಂ.ಐ.ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಂಖ್ಯಿಕಾ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
(2)ಮುಖ್ಯ ಮೌಲ್ಯಮಾಪನಾಧಿಕಾರಿಗಳು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

M/2018 Gowda DRP/114


ಫೋನ್ : ಕಛೇರಿ : 080 – 2663 2792, 2654 2307 ಫ್ಯಾಕ್ಸ್ : 080 – 2654 2308, ಇ-ಮೇಲ್ : md.kswdc@gmail.com

# ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

## ದೇವದಾಸಿ ಪುನರ್ವಸತಿ ಯೋಜನೆಯ ಶಿಫಾರಸ್ಸುಗಳು

List of studies Sl No (86)

ಅಲ್ಪಾವಧಿಯ ಶಿಫಾರಸ್ಸುಗಳು–

| ಕ್ರ.ಸಂ | ಶಿಫಾರಸ್ಸುಗಳು | ತೆಗೆದುಕೊಂಡ ಕ್ರಮಗಳು |
|---|---|---|
| ಎ | **ಪಿಂಚಣಿ ಯೋಜನೆ:–**<br>1) 60 ವರ್ಷಗಳನ್ನು ದಾಟಿದ ಹಿರಿಯ ನಾಗರಿಕರಿಗೆ ಮಾಸಿಕವಾಗಿ ರೂ.2500/–ರ ಪತ್ಯೇಕವಾದ ಹೆಚ್ಚಿನ ಪಿಂಚಣಿ ಹಂತವನ್ನು ಪ್ರಾರಂಭಿಸುವುದು | ಸರ್ಕಾರಿ ಆದೇಶದಂತೆ 45 ವರ್ಷ ಮೀರಿದ ಎಲ್ಲಾ ಮಾಜಿ ದೇವದಾಸಿಯರಿಗೆ ಮಾಸಾಶನ ಮೊತ್ತವನ್ನು ಪ್ರಸ್ತುತವಾಗಿ ರೂ.1500/– ನೀಡಲಾಗುತ್ತಿದ್ದು, ಈ ಮೊತ್ತವನ್ನು ರೂ.2000/– ಗಳಿಗೆ ಹೆಚ್ಚಿಸಲು ಸರ್ಕಾರಕ್ಕೆ ಎಸ್‌ಸಿಎಸ್‌ಪಿ/ಟಿಎಸ್‌ಪಿ ಅಭಿವೃದ್ಧಿ ಪರಿಷತ್ತಿನ 2019–20ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಸರ್ಕಾರದ ಆದೇಶದಂತೆ, ಕ್ರಮ ಕೈಗೊಳ್ಳಲಾಗುವುದು. |
| | 2)ಪಿಂಚಣಿ ಅನುಕೂಲಗಳಿಗೆ ಕಡ್ಡಾಯವಾಗಿ ಆಧಾರ್ ಲಿಂಕ್ ಮಾಡುವುದು | ಮಾಸಿಕ ಪಿಂಚಣಿಯನ್ನು ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟ 45 ವರ್ಷ ಮೀರಿದ ಮಾಜಿ ದೇವದಾಸಿಯರಿಗೆ ಆರ್.ಟಿ.ಜಿ.ಎಸ್. ಮೂಲಕ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಪಾವತಿಸಲಾಗುತ್ತಿದೆ. ಬ್ಯಾಂಕಿನಲ್ಲಿರುವ ಮಾಜಿ ದೇವದಾಸಿಯರ ಖಾತೆಗಳೊಂದಿಗೆ ಆಧಾರ್ ಲಿಂಕೇಜ್ ಆಗಿರುತ್ತದೆ. |
| | 3)ಪಿಂಚಣಿ ಸೌಲಭ್ಯಗಳನ್ನು ಮಾಸಿಕವಾಗಿ ವಿತರಿಸುವುದು | ಸರ್ಕಾರದಿಂದ ಪ್ರತಿ ತ್ರೈಮಾಸಿಕವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದ್ದು, ಮಾಜಿ ದೇವದಾಸಿಯರ ಬೇಡಿಕೆಯಂತೆ ಮಾಸಿಕವಾಗಿ ಮಾಸಾಶನ ನೀಡಲು ಅನುವಾಗುವಂತೆ, ಮಾಸಾಶನದ ಅನುದಾನವನ್ನು ಮುಂಗಡವಾಗಿ ಬಿಡುಗಡೆ ಮಾಡಲು ಅಥವಾ ಪ್ರತಿ ತಿಂಗಳು ಬಿಡುಗಡೆ ಮಾಡಲು ಕೋರಲಾಗಿದ್ದು, ಸರ್ಕಾರದಿಂದ ಈ ಕುರಿತಾಗಿ ಪ್ರತಿ ತ್ರೈಮಾಸಿಕ ಅವಧಿಯಲ್ಲಿ ಅನುದಾನ ಬಿಡುಗಡೆ ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲವೆಂದು ತಿಳಿಸಿರುತ್ತದೆ. (ಪತಾಕೆ–1)<br>ಆದಾಗ್ಯೂ ನಿಗಮದಿಂದ ನಿರ್ದೇಶಕರ ಮಂಡಳಿಯ ಅನುಮತಿ ಪಡೆದು ಬೇರೆ ಯೋಜನೆಗಳಿಗೆ ಬಿಡುಗಡೆಯಾದ ಅನುದಾನದಿಂದ ವಿಳಂಬ ಮಾಡದೆ ಮಾಸಿಕ ಪಿಂಚಣಿಯನ್ನು ಪಾವತಿಸಿ ಮುಂದಿನ ತ್ರೈಮಾಸಿಕ ಅನುದಾನ ಬಿಡುಗಡೆ ಸಂದರ್ಭದಲ್ಲಿ ಅನುದಾನ ಪಡೆದ ಯೋಜನೆಗಳ ಖಾತೆಗೆ ಮರುಹೊಂದಾಣಿಕೆ ಮಾಡಲಾಗುತ್ತಿದೆ. |
| ಬಿ | **ವಸತಿ ಯೋಜನೆ:–**<br>ವಸತಿ ಯೋಜನೆಯ ಫಲಾನುಭವಿಗಳಿಗೆ ಶೌಚಾಲಯ ನಿರ್ಮಾಣವು ಕಡ್ಡಾಯವಾಗಿರುತ್ತದೆ ಮತ್ತು ಹಿಂದಿನ ಪ್ರಕರಣಗಳಲ್ಲೂ ಶೌಚಾಲಯ ನಿರ್ಮಾಣ ಮಾಡಿರದಿದ್ದರೆ, ಅದನ್ನು ಈಗ ನಿರ್ಮಾಣ ಮಾಡ ಬೇಕಾಗಿರುತ್ತದೆ. ಸ್ಥಳದ ಅಭಾವ ಇದ್ದಲ್ಲಿ ಪಂಚಾಯಿತಿಯು ಸಾರ್ವಜನಿಕ ಶೌಚಾಲಯದ ನಿರ್ಮಾಣವನ್ನು ಪ್ರಾರಂಭಿಸಬೇಕು ಸಾರ್ವಜನಿಕ ಶೌಚಾಲಯವು ಎಲ್ಲಾ ಜಾತಿಯ ಜನರಿಗೆ ಲಭ್ಯತೆಯ ಬಗ್ಗೆ ಖಾತರಿಪಡಿಸಿಕೊಳ್ಳಬೇಕು. | ಮಾಹಿತಿಯ ಬಗ್ಗೆ ಅರಿವು ನೀಡಲಾಗಿದೆ. |
| | 1)ವಸತಿ ನಿರ್ಮಾಣದಲ್ಲಿ ಲಂಬವಾದ ಬೆಳವಣಿಗೆಯನ್ನು ಉತ್ತೇಜಿಸ ಬೇಕಾಗಿರುತ್ತದೆ. | ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನಲ್ಲಿ ನಿಗಮದ ಭೂಮಿಯಲ್ಲಿ ಒಟ್ಟು 67 ನಿವೇಶನಗಳನ್ನು ರಚಿಸಲಾಗಿರುತ್ತದೆ. ಅದರಲ್ಲಿ 29 ಮಾಜಿ |

| | | |
|---|---|---|
| | ಭೂಮಿಯು ಒಂದು ವಿರಳ ಸಂಪನ್ಮೂಲವಾಗಿದ್ದು, ಅನೇಕ ಫಲಾನುಭವಿಗಳು ಅದನ್ನು ಪಡೆಯಲು ಆಗುತ್ತಿಲ್ಲ ಮತ್ತು ನಿರ್ವಹಣೆಯು ಪ್ರಮುಖ ಸಮಸ್ಯೆಯಾಗಿರುವುದರಿಂದ ಇಲಾಖೆಯು ಲಭ್ಯವಿರುವ ಸರ್ಕಾರಿ ಭೂಮಿಯಲ್ಲಿ ಎಲ್ಲಾ ಮೂಲ ಸೌಲಭ್ಯಗಳ ಜೊತೆಗೆ ಕಟ್ಟಡ ಸಂಕೀರ್ಣಗಳನ್ನು ನಿರ್ಮಿಸುವುದರ ಮೂಲಕವಾಗಿ ಲಂಬವಾದ ಬೆಳವಣಿಗೆಯ ಬಗ್ಗೆ ಯೋಚಿಸಬೇಕಾಗಿರುತ್ತದೆ. | ದೇವದಾಸಿಯರಿಗೆ ಮನೆ ಕಟ್ಟಿಕೊಳ್ಳಲು ಹಕ್ಕುಪತ್ರಗಳನ್ನು ನೀಡಲಾಗಿರುತ್ತದೆ. ಈ ಬಗ್ಗೆಯೂ ಸಹ ಕ್ರಮ ವಹಿಸಲಾಗುತ್ತಿದೆ.<br><br>ಪ್ರಸ್ತುತವಾಗಿ 1157 ನಿವೇಶನ ಹೊಂದಿದ ಮಾಜಿ ದೇವದಾಸಿಯರಿದ್ದು, ಇವರುಗಳಿಗೆ ವಸತಿ ಸೌಲಭ್ಯವನ್ನು ಆದ್ಯತೆಯ ಮೇರೆಗೆ ಒದಗಿಸಬೇಕಾಗಿರುತ್ತದೆ. ಹಾಗೆಯೇ 8683 ನಿವೇಶನ ರಹಿತ ಹಾಗೂ ವಸತಿ ರಹಿತ ಮಾಜಿ ದೇವದಾಸಿಯರಿದ್ದು, ಅವರುಗಳಿಗೆ ನಿವೇಶನ ಹಾಗೂ ವಸತಿ ಸೌಲಭ್ಯ ಒದಗಿಸಬೇಕಾಗಿರುತ್ತದೆ. ಮಾಜಿ ದೇವದಾಸಿಯರುಗಳಿಗೆ ವಸತಿ ನಿರ್ಮಾಣಕ್ಕೆಂದು ರಾಯಚೂರು ಜಿಲ್ಲೆಯಲ್ಲಿ 05.00 ಎಕರೆ, ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ 3.14 ಎಕರೆ, ಸಂಡೂರು ತಾಲ್ಲೂಕಿನ ಬಂಡ್ರಿ ಗ್ರಾಮದಲ್ಲಿ 6.00 ಎಕರೆ, ಕೂಡ್ಲಿಗಿಯಲ್ಲಿ 4.00 ಎಕರೆ, ಹೆಚ್.ಬಿ.ಹಳ್ಳಿ ತಾಲ್ಲೂಕಿನ ಶೀಗೇನಹಳ್ಳಿ-1 ರಲ್ಲಿ 1.00 ಎಕರೆ, ಶೀಗೇನಹಳ್ಳಿ-2ರಲ್ಲಿ 1.00 ಎಕರೆ, ಬಸರಗೋಡು-1.00 ಎಕರೆ ಮತ್ತು ಹಲಗಾಪುರ 1.00 ಎಕರೆ ಹೀಗೆ ಒಟ್ಟು 22.14 ಎಕರೆ ಭೂಮಿಯನ್ನು ಮಾಜಿ ದೇವದಾಸಿಯರಿಗೆ ನಿವೇಶನ ಒದಗಿಸಿಕೊಡಲು ಮಂಜೂರು ಮಾಡಿರುತ್ತಾರೆ. (ಪತಾಕೆ-2)<br>2019-20ನೇ ಸಾಲಿನಲ್ಲಿ ಭೂಮಿಯನ್ನು ಸಮತಟ್ಟುಗೊಳಿಸಿ ಮೂಲಭೂತ ಸೌಕರ್ಯ ಕಲ್ಪಿಸಿ ಅರ್ಹ ಮಾಜಿ ದೇವದಾಸಿಯರಿಗೆ ನಿವೇಶನಗಳ ಹಕ್ಕುಪತ್ರ ನೀಡಿ ಅವರಿಗೆ ವಸತಿ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುವುದು. |
| | 2)ಶೋಚನೀಯ ಸ್ಥಿತಿಯಲ್ಲಿರುವ, ಶಿಥಿಲವಾದ ಆರ್‌ಸಿಸಿಯಲ್ಲದ ಹಳೆಯದಾದ ಮಣ್ಣಿನ ಮನೆಗಳ ಹಾಗೂ ಕುಸಿದ ಮನೆಗಳ ನಿರ್ವಹಣೆಗಾಗಿ ಮತ್ತು ಪುನರ್ ನಿರ್ಮಾಣಕ್ಕಾಗಿ ಅನುದಾನದ ಅಗತ್ಯವಿರುತ್ತದೆ. | 2020-21ನೇ ಆರ್ಥಿಕ ವರ್ಷದಲ್ಲಿ ಶಿಥಿಲವಾದ ಹಾಗೂ ಕುಸಿದ ಮನೆಗಳಿಗೆ ವಸತಿ ಯೋಜನೆಯಡಿ ಆರ್ಥಿಕ ಸೌಲಭ್ಯ ಒದಗಿಸಿಕೊಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. |
| | 3)ಪಂಚಾಯತ್‌ನ ವಿವಿಧ ಹಂತಗಳಲ್ಲಿ ಭ್ರಷ್ಟಾಚಾರವನ್ನು ಕಡಿಮೆ ಮಾಡುವುದು ಮತ್ತು ಸಾಲದ ಮೊತ್ತವನ್ನು ವಿತರಿಸಲು ದೇವದಾಸಿ ಪುನರ್ವಸತಿ ಕಾರ್ಯಕ್ರಮದ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡುವ ಅಗತ್ಯತೆಯಿರುತ್ತದೆ. | ವಸತಿ ಯೋಜನೆಯನ್ನು ಪ್ರಸ್ತುತವಾಗಿ ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ ಮೂಲಕ ಅನುಷ್ಠಾನ ಗೊಳಿಸಲಾಗುತ್ತಿದೆ. ವಸತಿಗಳ ಪ್ರಗತಿಯ ಕುರಿತಾಗಿ ಜಿಲ್ಲಾಧಿಕಾರಿಗಳು, ವ್ಯವಸ್ಥಾಪಕ ನಿರ್ದೇಶಕರು, ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಹಾಗೂ ಅಭಿವೃದ್ಧಿ ಆಯುಕ್ತರು ಮತ್ತು ಅಪರ ಮುಖ್ಯ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯ ಸಭೆಗಳಲ್ಲಿ ಪರಿಶೀಲನೆ ನಡೆಸಿ ವಸತಿಗಳನ್ನು ಶೀಘ್ರದಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಸಿ | **ಆದಾಯ ಉತ್ಪನ್ನ ಯೋಜನೆ:**<br>1)ತುಲನಾತ್ಮಕವಾಗಿ ಯುವ ಫಲಾನುಭವಿಗಳನ್ನು ಸಬಲಗೊಳಿಸಲು, ಸಹಕಾರಿಯಾದ, ಕೌಶಲ್ಯ ಆಧಾರಿತ, ಮಾರುಕಟ್ಟೆ ಸಂಬಂಧಿತ ಯೋಜನೆ ಗಳನ್ನು ಉತ್ತೇಜಿಸುವ ಅಗತ್ಯತೆಯಿರುತ್ತದೆ. ಕಿರು ಹಣಕಾಸು ಆಧಾರಿತ ಚಟುವಟಿಕೆಗಳಿಂದ ದೂರವಿರಿಸುವ ಉದ್ದೇಶಕ್ಕಾಗಿ ಸ್ವಸಹಾಯ ಗುಂಪುಗಳನ್ನು ಪುನಶ್ಚೇತನಗೊಳಿಸ ಬೇಕಾಗಿರುತ್ತದೆ. | ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟ ಮಾಜಿ ದೇವದಾಸಿಯರೆಲ್ಲರೂ ಹೆಚ್ಚಿನ ಭಾಗ 45 ವರ್ಷ ಮೀರಿದವರಾಗಿರುತ್ತಾರೆ. ಸುಮಾರು 6000 ರಿಂದ 7000 ಮಾಜಿ ದೇವದಾಸಿಯರು 35 ರಿಂದ 45 ವರ್ಷದ ವಯೋಮಿತಿಯಲ್ಲಿ ಇರುತ್ತಾರೆ. ಅನೇಕ ಮಾಜಿ ದೇವದಾಸಿಯರು ಗ್ರಾಮೀಣ ಭಾಗದವರಾಗಿದ್ದು, ಹೈನುಗಾರಿಕೆ, ಕುರಿ ಸಾಕಾಣಿಕೆ, ಸಣ್ಣ ಪ್ರಮಾಣದ ವ್ಯಾಪಾರ, ಬೀದಿಬದಿ ವ್ಯಾಪಾರವನ್ನು ಅವಲಂಬಿಸಿರುತ್ತಾರೆ. ಮಾಜಿ ದೇವದಾಸಿಯರ ಆರ್ಥಿಕ ಸಬಲೀಕರಣಕ್ಕಾಗಿ 2018-19ನೇ ಸಾಲಿನಿಂದ ಈ ಹಿಂದೆ ಇದ್ದ ರೂ.50,000/- ಗಳ ಘಟಕ ವೆಚ್ಚವನ್ನು ರೂ.1,00,000/- ಲಕ್ಷಕ್ಕೆ ಹೆಚ್ಚಿಸಿ ನೀಡಲಾಗುತ್ತಿದೆ. ಆರ್ಥಿಕ ಸೌಲಭ್ಯ ಪಡೆಯುವ ಎಲ್ಲಾ ಫಲಾನುಭವಿಗಳಿಗೆ ಉದ್ಯಮಶೀಲತಾ ಅಭಿವೃದ್ಧಿ |

| | | |
|---|---|---|
| | | ತರಬೇತಿ ನೀಡಲಾಗುತ್ತಿದೆ. ಮಾಜಿ ದೇವದಾಸಿಯರ ಸ್ವ ಸಹಾಯ ಗುಂಪುಗಳನ್ನು ಈ ಹಿಂದೆ ರಚಿಸಿದ್ದು, ಅವುಗಳನ್ನು ಸ್ತ್ರೀಶಕ್ತಿ ಸ್ವ ಸಹಾಯ ಗುಂಪುಗಳನ್ನಾಗಿ ಪರಿವರ್ತಿಸಲು ಯೋಜನಾ ನಿರ್ದೇಶಕರು, ಸ್ತ್ರೀಶಕ್ತಿ ವಿಭಾಗ ಇವರಿಗೆ ಪತ್ರ ವ್ಯವಹಾರ ಮಾಡಲಾಗಿದೆ. (ಪತಾಕೆ-3) |
| | 2)ಜೀವನಾಧಾರ ಮಟ್ಟದಾಚೆಗೆ ಏನನ್ನಾದರೂ ಸಾಧಿಸಲು ವೈಯಕ್ತಿಕ ವಾದ ನಿಧಿಯು ತೀರ ಕಡಿಮೆಯಾಗುವುದರಿಂದ ವೈಯಕ್ತಿಕ ಫಲಾನುಭವಿ ಗಳಿಂದ ಸಾಮೂಹಿಕ ಸಹಕಾರಿ ಉಪಕ್ರಮಕ್ಕೆ ಒತ್ತನ್ನು ಬದಲಾಯಿಸಲು ಉತ್ತೇಜನವನ್ನು ನೀಡ ಬೇಕಾಗಿದೆ. | ಮಾಜಿ ದೇವದಾಸಿಯರ ಆರ್ಥಿಕ ಸಬಲೀಕರಣಕ್ಕಾಗಿ 2018-19ನೇ ಸಾಲಿನಿಂದ ಈ ಹಿಂದೆ ಇದ್ದ ರೂ.50,000/- ಗಳ ಘಟಕ ವೆಚ್ಚವನ್ನು ರೂ.1,00,000/- ಲಕ್ಷಕ್ಕೆ ಹೆಚ್ಚಿಸಿ ನೀಡಲಾಗುತ್ತಿದೆ. ಆರ್ಥಿಕ ಸೌಲಭ್ಯ ಪಡೆಯುವ ಎಲ್ಲಾ ಫಲಾನುಭವಿಗಳಿಗೆ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ನೀಡಲಾಗುತ್ತಿದೆ. |
| ಡಿ | **ಮಾಜಿ ದೇವದಾಸಿಯರ ಮಕ್ಕಳು**<br>1)20 ವರ್ಷ ವಯಸ್ಸನ್ನು ತಲುಪುವವರೆಗೂ ತಾಯಿಯನ್ನು ಕಳೆದು ಕೊಂಡ ದೇವದಾಸಿಯರ ಮಕ್ಕಳಿಗೆ ತಾತ್ಕಾಲಿಕ ಪಿಂಚಣಿಯ ಅನುಕೂಲಗಳನ್ನು ನೀಡುವುದನ್ನು ಪ್ರಾರಂಭಿಸ ಬೇಕಾಗಿರುತ್ತದೆ. | ನಿಗಮದಲ್ಲಿ ಪ್ರಸ್ತುತವಾಗಿ ಮಾಜಿ ದೇವದಾಸಿಯರ ಮಕ್ಕಳಿಗಾಗಿ ಯಾವುದೇ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿಲ್ಲ. 2019-20ನೇ ಸಾಲಿನಲ್ಲಿ ಮಾಜಿ ದೇವದಾಸಿಯರ ಹೆಣ್ಣು ಮಕ್ಕಳಿಗೆ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತದಲ್ಲಿ ಉದ್ಯೋಗಿನಿ, ಸಮೃದ್ಧಿ ಯೋಜನೆಗಳಡಿ ಆರ್ಥಿಕ ಚಟುವಟಿಕೆ ಕೈಗೊಳ್ಳಲು ಅವಕಾಶ ಮಾಡುವಂತೆ ಮಾನ್ಯ ಇಲಾಖಾ ಸಚಿವರು ಸೂಚಿಸಿರುತ್ತಾರೆ. |
| | 2)ಫಲಾನುಭವಿಯ ಮಕ್ಕಳ ಸಂಪೂರ್ಣ ಶಿಕ್ಷಣ ಮತ್ತು ವಿದ್ಯಾರ್ಥಿ ನಿಲಯದ ಶುಲ್ಕವನ್ನು ಮರುಪಾವತಿ ಮಾಡುವುದಲ್ಲದೆ ಅವರ ಉನ್ನತ ಮತ್ತು ವೃತ್ತಿಪರ ಶಿಕ್ಷಣ (ಅವರು ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿಯೂ ಸಹಾ ಪ್ರವೇಶಸ್ಥಾನ (ಸೀಟ್ ಲಭ್ಯತೆ ಪಡೆದರೂ ಸಹಾ) ಪಡೆಯುವವರೆಗೂ ಅನುಸರಿಸಬೇಕು. | ನಿಗಮದಲ್ಲಿ ಪ್ರಸ್ತುತವಾಗಿ ಮಾಜಿ ದೇವದಾಸಿಯರ ಮಕ್ಕಳಿಗಾಗಿ ಯಾವುದೇ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿಲ್ಲ. ಮಾಜಿ ದೇವದಾಸಿಯರಲ್ಲಿ ಹೆಚ್ಚಿನ ಮಹಿಳೆಯರು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರುತ್ತಾರೆ. ಮಾಜಿ ದೇವದಾಸಿಯರ ಮಕ್ಕಳು ಸಮಾಜ ಕಲ್ಯಾಣ ಇಲಾಖೆಯ ಮೂಲಕ ನಡೆಸಲಾಗುತ್ತಿರುವ ವಸತಿ ಶಾಲೆಗಳಲ್ಲಿ ಉಚಿತ ಶಿಕ್ಷಣ ಮತ್ತು ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿವೇತನದ ಸೌಲಭ್ಯ ಪಡೆಯಲು ಅವಕಾಶವಿರುತ್ತದೆ. |
| | 3)ವಿದ್ಯಾವಂತ ನಿರುದ್ಯೋಗಿಗಳಿಗೆ ಕೆಲವು ಕೌಶಲ್ಯಾಧಾರಿತ ಉದ್ಯೋಗ ಕೇಂದ್ರೀಕೃತ ತರಬೇತಿಯನ್ನು ಮತ್ತು ಉದ್ಯಮಶೀಲತಾ ಚಟುವಟಿಕೆಗಳಿಗೆ ಸಾಲಗಳನ್ನು ನೀಡಬೇಕಾಗಿರುತ್ತದೆ. | ಮಾಜಿ ದೇವದಾಸಿಯರೆಲ್ಲರೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಸೇರಿದಂತೆ ವಿವಿಧ ಅಭಿವೃದ್ಧಿ ನಿಗಮಗಳು ಅನುಷ್ಠಾನಗೊಳಿಸುತ್ತಿರುವ ಆರ್ಥಿಕ ಸಬಲೀಕರಣ ಹಾಗೂ ಕೌಶಲ್ಯಾಭಿವೃದ್ಧಿ ಯೋಜನೆಯ ಸೌಲಭ್ಯವನ್ನು ಪಡೆಯಬಹುದಾಗಿರುತ್ತದೆ. |
| ಇ | **ಅಸ್ತಿತ್ವದಲ್ಲಿರುವ ಈ ಕರ್ನಾಟಕ ದೇವದಾಸಿ (ಸಮರ್ಪಣೆಯ ನಿಷೇಧ) ಶಾಸನವನ್ನು ಹೆಚ್ಚು ಕಠಿಣಗೊಳಿಸಬೇಕು**<br>ರೂ.1,00,000/-ದವರೆಗೆ ದಂಡವನ್ನು ಹೆಚ್ಚಿಸುವುದು ಮತ್ತು 10 ವರ್ಷಗಳವರೆಗೆ ಕಠಿಣ ಸೆರೆವಾಸವನ್ನು ವಿಧಿಸುವುದು ಮತ್ತು ಪರಿಚ್ಛೇಧ 7ರ ಉಪ ಪರಿಚ್ಛೇಧ-2ರ ಉಪವಾಕ್ಯ (ಎ)/(ಬಿ)ರಡಿ ನಿಯಮಗಳನ್ನು ರೂಪಿಸಲು ಉತ್ತಮವಾಗಿ ಜಾರಿಗೊಳಿಸಲು ಹೆಚ್ಚಿನ ಅಧಿಕಾರವನ್ನು ನೀಡಲು-<br>ಎ) ತನಿಖೆ ಇತ್ಯಾದಿಗಳ ರೀತಿಯನ್ನು ಮತ್ತು | ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. |
| | ಬಿ) ದೇವದಾಸಿಗಳ ಆರೈಕೆ/ರಕ್ಷಣೆ ಇತ್ಯಾದಿಗಳ ಕುರಿತು ಸರ್ಕಾರದ ವಿವಿಧ ಆಡಳಿತಾತ್ಮಕ, ಕಲ್ಯಾಣ ಮತ್ತು ಕಾನೂನು ಜಾರಿಗೊಳಿಸುವ ಇಲಾಖೆಗಳ ಆಯಾ | ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. |

| | | |
|---|---|---|
| | ಪಾತ್ರವನ್ನು ವಿವರಿಸುತ್ತದೆ. | |
| | ಸಿ) ಮಹಾರಾಷ್ಟ್ರದ ರೀತಿಯಲ್ಲಿಯೇ ನಿಯಂತ್ರಣ ಮಂಡಳಿಯ ರಚನೆ | --- |
| **8.2** | **ದೀರ್ಘಕಾಲಿಕ ಶಿಫಾರಸ್ಸುಗಳು:-** | |
| 1 | ಪ್ರದೇಶದ ದೇವದಾಸಿಯರ ಅದರಲ್ಲೂ ನಿರ್ದಿಷ್ಟವಾಗಿ ಮಾಜಿ ದೇವದಾಸಿಯರ ಹೆಣ್ಣು ಮಕ್ಕಳ ಮತ್ತು ಬಡವರಾದ ದಲಿತ ಹುಡುಗಿಯರ ಕಳ್ಳ ಸಾಗಣೆಯನ್ನು ಮತ್ತು ಲೈಂಗಿಕ ಕಾರ್ಯಕ್ಕೆ ತೊಡಗಿಸುವುದನ್ನು ತಡೆಗಟ್ಟುವ ಕುರಿತು ಯೋಜನೆಯು ಕೇಂದ್ರೀಕರಿಸುವ ಕಡೆಗೆ ಸ್ಥಳಾಂತರಿಸಬೇಕು. | ಪೋಲಿಸ್ ಇಲಾಖೆ, ಆ್ಯಂಟಿ ಟ್ರಾಫಿಕಿಂಗ್ ಬ್ಯೂರೋ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಆ್ಯಂಟಿ ಟ್ರಾಫಿಕಿಂಗ್ ಸೆಲ್ ಮೂಲಕ ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕಾವಲು ಸಮಿತಿಗಳ ರಚನೆ, ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. |
| 2 | ಹಿಂದಿನ ಹೆಚ್ಚಿನ ದೇವದಾಸಿಯರು (ಶೇಕಡಾ 95.3ರಷ್ಟು) ದಲಿತ ಸಮುದಾಯದವರಾಗಿದ್ದರಿಂದ, ಜಾತಿ ಆಧಾರಿತ ಲೈಂಗಿಕ ಕಾರ್ಯದ ವಿರುದ್ಧ, ಬಾಲ್ಯ ವಿವಾಹ, ಕುಡಿತ ಪದ್ಧತಿಗಳ ವಿರುದ್ಧ ಒಂದು ಸಾಮಾಜಿಕ ಚಳುವಳಿಯನ್ನು ಪ್ರಾರಂಭಿಸಿ ಈ ದೊಡ್ಡ ಸಾಮಾಜಿಕ ಸಮಸ್ಯೆಗಳನ್ನು ಎದುರಿಸಲು ಉತ್ತೇಜಿಸ ಬೇಕಾಗಿರುತ್ತದೆ. ಇದರಲ್ಲಿ ದಲಿತ ಸಂಘಟನೆಗಳನ್ನು ಒಳಗೊಳ್ಳಿಸ ಬೇಕಾಗಿರುತ್ತದೆ. | ಈಗಾಗಲೇ ಮಾಸ್, ದೇವದಾಸಿ ವಿಮೋಚನಾ ಸಂಘ ಇತ್ಯಾದಿ ಸಂಘ ಸಂಸ್ಥೆಗಳು ಜಿಲ್ಲಾ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿದೆ. |
| 3 | ಇಂತಹ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ದೊಡ್ಡ ಪ್ರಮಾಣದ ಬಂಡವಾಳದ ತೀವ್ರ ಕೈಗಾರಿಕೆಗಳು ಪ್ರಚಾರವನ್ನು ಮಾಡ ಬೇಕಾಗಿರುತ್ತದೆ. | ಕ್ರಮವಾಗಬೇಕಿದೆ |
| 4 | ಹೆಜ್ಜೆ ಗುರುತು ಯೋಜನೆಯಡಿ ಬಾಲಕಿಯರನ್ನು ಮತ್ತು ಮಕ್ಕಳನ್ನು ಗುರುತಿಸುವ ವ್ಯವಸ್ಥೆಯನ್ನು, ಜನನವನ್ನು ನೋಂದಣಿ ಮಾಡುವುದನ್ನು ಸರಿಯಾಗಿ ಅನುಷ್ಠಾನಗೊಳಿಸ ಬೇಕಾಗಿರುತ್ತದೆ. ಸಮರ್ಪಣೆಗೆ ಒಳಗಾಗುವರಲ್ಲಿ-<br>- ವಿಕಲಚೇತನರಾದ ಹೆಣ್ಣುಮಕ್ಕಳು<br>-ಗುಣಪಡಿಸಲಾಗದ ಖಾಯಿಲೆಗಳಿಂದ ಬಳಲುತ್ತಿರುವ ಸ್ವತಃ ಹುಡುಗಿ ಅಥವಾ ಕುಟುಂಬ ಸದಸ್ಯರು<br>- ಮಾಜಿ ದೇವದಾಸಿಯರ ಮಗಳು<br>-ಕೆಲವೊಂದು ಆಚರಣೆಗಳು ಮತ್ತು ಸಂಪ್ರದಾಯ ಗಳನ್ನು ನಂಬುವ ಕುಟುಂಬಗಳ ಹೆಣ್ಣು ಮಕ್ಕಳು ಇವರುಗಳು ಸೇರಿರುತ್ತಾರೆ | ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ಮೂಲಕ ಜನನದ ನೊಂದಣಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸಲಾಗುತ್ತಿದೆ. |
| | (1) ವಯಸ್ಸಿನ ಮಾನದಂಡದ ಕಾರಣದಿಂದ ಹಿಂದಿನ ಸಮೀಕ್ಷೆಗಳಲ್ಲಿ ಕೈ ಬಿಟ್ಟು ಹೋದ ದೇವದಾಸಿಗಳನ್ನು ಸೇರಿಸಿಕೊಳ್ಳಲು ಮತ್ತೊಂದು ಅಂತಿಮ ಸಮೀಕ್ಷೆಯ ಅಗತ್ಯವಿದೆ. ದೇವದಾಸಿ ಪುನರ್ವಸತಿ ಕಾರ್ಯಕ್ರಮದ ಕಛೇರಿಯಲ್ಲಿ ಈಗಾಗಲೇ ಅವರ ಬಗ್ಗೆ ವಿವರಗಳು ಲಭ್ಯವಿರುತ್ತದೆ. | ಈ ಕುರಿತಾಗಿ ಮರು (ಅಂತಿಮ) ಸಮೀಕ್ಷೆ ಕೈಗೊಳ್ಳಲು ಸರ್ಕಾರಕ್ಕೆ ಶೀಘ್ರದಲ್ಲಿ ಪ್ರಸ್ತಾವನೆ ಸಲ್ಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| | (2) ಜಿಲ್ಲಾ ಕೇಂದ್ರಗಳಲ್ಲಿ ಮಹಿಳಾ ಲೈಂಗಿಕ ಕಾರ್ಯಕರ್ತೆಯರ ಮಕ್ಕಳ ವಸತಿ ಶಾಲೆಗಳನ್ನು ಮತ್ತು ಮಹಿಳಾ ಲೈಂಗಿಕ ಕಾರ್ಯಕರ್ತೆ ಯರಿಗಾಗಿ ವೃದ್ಧಾಶ್ರಮಗಳನ್ನು ನಿರ್ಮಾಣ ಮಾಡಬೇಕಾಗಿರುತ್ತದೆ. | ಈಗಾಗಲೇ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಸತಿ ಶಾಲೆಗಳು ಹಾಗೂ ವೃದ್ಧಾಶ್ರಮಗಳಲ್ಲಿ, ಸರ್ಕಾರಿ ರಾಜ್ಯ ಮಹಿಳಾ ನಿಲಯಗಳಲ್ಲಿ ದಾಖಲಿಸಬಹುದಾಗಿದೆ. ಮಾಜಿ ದೇವದಾಸಿಯರ ಹೆಣ್ಣು ಮಕ್ಕಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವ |

| | | |
|---|---|---|
| | | ವಸತಿ ಶಾಲೆಗಳಲ್ಲಿ (ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು) ಶೇಕಡ 5 ರಷ್ಟು ಮೀಸಲಾತಿಯನ್ನು ಪ್ರವೇಶ ಪರೀಕ್ಷೆಗೆ ವಿನಾಯಿತಿ ನೀಡಿ ಅವಕಾಶ ಕಲ್ಪಿಸಿಕೊಡಲಾಗಿರುತ್ತದೆ. (ಪತಾಕೆ-4) |

"ಕರಡು ವ್ಯ.ನಿರ್ದೇಶಕರಿಂದ
ಅನುಮೋದಿಸಲ್ಪಟ್ಟಿದೆ"

ಪ್ರಧಾನ ವ್ಯವಸ್ಥಾಪಕರು-1,
ಕ.ರಾ.ಮ.ಅ.ನಿಗಮ